ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ.ನಂ. **2251/2024**

| | | |
|---|---|---|
| ಆರೋಪಿತರ ಹೆಸರು | : | ಶ್ರೀ. ಶಬ್ಬೀರ ಬಾಶಾ ಶೇಖ್, |
| ಪ್ರಾಯ | : | 33 ವರ್ಷ, |
| ವೃತ್ತಿ | : | ವ್ಯವಹಾರ, |
| ವಾಸ | : | ಅರ್ಜುನ್ ಟಾಕೀಸ್ ಹತ್ತಿರ, ಕಾಜುಬಾಗ, ಕಾರವಾರ. |

ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿತರಾದ ನೀವು ಫಿರ್ಯಾದಿ ಸೇಫ್ ಸ್ಟಾರ್ ಸೌಹಾರ್ಧ ಸಹಕಾರಿ ನಿಯಮಿತದ ಸದಸ್ಯರಾಗಿದ್ದು ಫಿರ್ಯಾದಿ ಸೊಸೈಟಿಯಲ್ಲಿ ಸಾಲಕ್ಕಾಗಿ ಅರ್ಜಿ ನೀಡಿದ್ದು, ಅದರಂತೆ ಫಿರ್ಯಾದಿ ಸೊಸೈಟಿಯು ರೂ.3,00,000/- ಸಾಲವನ್ನು ದಿನಾಂಕಃ 01-02-2022 ರಂದು ಮಂಜೂರು ಮಾಡಿದ್ದು, ಹಾಗೂ ಸಾಲವನ್ನು ಮರುಪಾವತಿ ಮಾಡುವುದಾಗಿ ಹೇಳಿದ್ದು, ನೀವು ಸದ್ರಿ ಸಾಲವನ್ನು ವಾಪಸ್ಸು ಕಟ್ಟದೇ, ಫಿರ್ಯಾದಿಯು ಸದ್ರಿ ಸಾಲವನ್ನು ಮರು ಪಾವತಿ ಮಾಡಲು ಕೇಳಿದಾಗ ನೀವು ಚೆಕ್ ನಂ.001474, ದಿನಾಂಕ 25-04-2024, ಐ.ಸಿ.ಐ.ಸಿ.ಐ. ಬ್ಯಾಂಕ್, ಕಾರವಾರ ಶಾಖೆ, ರೂ.3,53,000/-ಚೆಕ್ ನ್ನು ನೀಡಿದ್ದು, ಫಿರ್ಯಾದಿಯು ಸದ್ರಿ ಚೆಕ್ ನ್ನು ನಗದಿಕರಿಸಲು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಕಾರವಾರ ಶಾಖೆಗೆ ಸಲ್ಲಿಸಿದಾಗ ಸದ್ರಿ ಬ್ಯಾಂಕಿನವರು "Account Closed" ಎಂಬ ಹಿಂಬರಹ ನೀಡಿದ್ದು, ದಿನಾಂಕ 08-05-2024 ರಂದು ನೋಟೀಸು ನೀಡಿದ್ದು, 15 ದಿನಗಳ ಒಳಗೆ ಸದ್ರಿ ಸಾಲದ ಹಣವನ್ನು ಮರು ಪಾವತಿಸಲು ಕೇಳಿಕೊಂಡಿದ್ದರೂ ಸಹ ಚೆಕ್ಕಿನ ಹಣವನ್ನು ಪಿರ್ಯಾದಿಗೆ ಹಿಂದಿರುಗಿಸದೇ ಇರುವ ಅಪರಾಧಕ್ಕಾಗಿ ನೀವು 138 Negotiable Instrument Act ಅಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ: 1  ಈಗ  ಓದಿ ಹೇಳಿದ ಆಪಾದನೆ  ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2  ಈಗ  ಓದಿ ಹೇಳಿದ ಆಪಾದನೆಯನ್ನು  ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗ ಬಯಸುತ್ತೀರೋ?

ಉತ್ತರಃ

(ಸದ್ರಿ ಆಪಾದನೆಗಳನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು)

ಕಾರವಾರ
ದಿಃ 04-04-2025

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಕಾರವಾರ.